ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.1685/2022 CW-19 PW-7

| | | |
|---|---|---|
| ಹೆಸರು | : | ಸಿದ್ರಾಮೇಶ್ವರ |
| ತಂದೆಯ/ಗಂಡನ ಹೆಸರು | : | ರಾಮನಗೌಡ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಪಿಎಸ್ಐ ಎಫ್‌ಟಿಬಿ |
| ವಾಸಸ್ಥಳ | : | ರಾಯಚೂರು |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ **04-10-2023**

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ

ನಾನು ಸುಮಾರು ಕಳೆದ 5 ವರ್ಷಗಳಿಂದ ರಾಯಚೂರಿನ ಬೆರಳಚ್ಚು ತಜ್ಞ ಘಟಕದಲ್ಲಿ ಬೆರಳಚ್ಚು ತಜ್ಞನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ದಿಃ 30-12-2021 ರಂದು ಸಿಂಧನೂರಿನ ಪೋ.ನಿಯಂತ್ರಣ ಘಟಕದಿಂದ ಪೋನ ಕರೆ ಮಾಡಿ, ಸಿಂಧನೂರಿನ ಪ್ರಶಾಂತ ನಗರದಲ್ಲಿ ಚಾಸಾ-1 ರವರ ಮನೆಯಲ್ಲಿ ಕಳ್ಳತನವಾಗಿದೆ, ಅಲ್ಲಿ ಬಂದು ಬೆರಳುಮುದ್ರೆ ಪರೀಶೀಲಿಸಿ ವರದಿ ನೀಡುವಂತೆ ಕೇಳಿಕೊಂಡರು. ಅದರಂತೆ ಅದೇದಿನ ನಾನು ಸಿಂಧನೂರಿಗೆ ಸಂಜೆ 4-15 ಗಂಟೆಗೆ ಬಂದು, ಆಗ ನನ್ನೊಂದಿಗೆ ಚಾಸಾ-18 ರವರನ್ನು ಕರೆದುಕೊಂಡು ಬಂದಿದ್ದೆ.

ಚಾಸಾ-1 ರವರ ಮನೆಗೆ ಹೋಗಿ ಸಂಜೆ 4-15 ರಿಂದ 6-45 ರವರೆಗೆ ಪರೀಶೀಲಿಸಿ ನೋಡಲಾಗಿ ಮನೆಗೆ ಎರಡು ಕಟ್ಟಿಗೆ ಬಾಗಿಲುಗಳು ಎರಡು ಅಲ್ಮೆರಾಗಳು, ಮತ್ತು ಆಭರಣಗಳು ನಾಲ್ಕು ಡಬ್ಬಿಗಳು ಇದ್ದವು ಅವುಗಳನ್ನು ಪರೀಶೀಲಿಸಿ ನೋಡಲಾಗಿ, ಅಲ್ಮೆರಾಗಳ ಮೇಲೆ ಎರಡು ಆಕಸ್ಮಿಕ ಬೆರಳು ಮುದ್ರೆಗಳು ಕಂಡುಬಂದವು. ಅವುಗಳಿಗೆ ಪ್ರಶ್ನಿತ ಬೆರಳು ಮುದ್ರೆ ಮತ್ತು ಪ್ರಶ್ನಿತ ಬೆರಳು ಮುದ್ರೆ 1 ಎಂದು ಕ್ರಮವಾಗಿ ಸಂಖ್ಯೆ ನೀಡಿದೆ ಅದೇರೀತಿ ಚಾಸಾ-1 ರವರ ಮನೆಯಲ್ಲಿ ಓಡಾಡುವವರ ಬೆರಳು ಮುದ್ರೆಯನ್ನು ಸಹ ಸಂಗ್ರಹಿಸಿದೆ

ನಂತರ ನಾನು ನಮ್ಮ ಕಛೇರಿಗೆ ಹೋಗಿ ನಮ್ಮ ಕಛೇರಿಯಲ್ಲಿರುವ ಎ.ಎಫ್ಐ ಎಸ್ ತಂತ್ರಾಂಶದಲ್ಲಿರುವ ಬೆರಳು ಮುದ್ರೆಗಳನ್ನು ಮತ್ತು ಮಾದರಿ ಬೆರಳು ಮುದ್ರೆಯನ್ನು ಹೊಲಿಕೆ ಮಾಡಿ ನೀಡಲಾಗಿ, ಪ್ರಶ್ನಿತ (Q) ಬೆರಳು ಮುದ್ರೆಯು 1 ನೇ ಆರೋಪಿಯ ಬೆರಳು ಮುದ್ರೆಯೊಂದಿಗೆ ಹೊಲಿಕೆಯಾಗಿದೆ. ಪ್ರಶ್ನಿತ (Q1) 1 ನೇ ಬೆರಳು ಮುದ್ರೆಯು ಚಾಸಾ-1 ರವರ ಬಲಗೈ ತೋರು ಬೆರಳಿಗೆ ಹೊಲಿಕೆ ಆಯಿತು. ನಾನು ಪ್ರಶ್ನಿತ (Q1) ನ ಅಭಿಪ್ರಾಯವನ್ನು ನೀಡಿದ್ದೇನೆ. ಪ್ರಶ್ನಿತ (Q) ಮುದ್ರೆಯ ಅಭಿಪ್ರಾಯವನ್ನು ಚಾಸಾ-20 ರವರು ನೀಡಿದ್ದಾರೆ.

ನಾನು ನೀಡಿದ ವರದಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅಪರಾಧ ಸ್ಥಳ ಪರೀಕ್ಷೆಯ ವರದಿ ಮತ್ತು ಆಕಸ್ಮಿಕ ಬೆರಳು ಮುದ್ರೆಯ ಪರೀಕ್ಷೋತ್ತರ ಪ್ರಮಾಣ ಪತ್ರ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-26 ಮತ್ತು 27 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಗಳನ್ನು ನಿಪಿ-26(ಎ) ಮತ್ತು 27(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ಸ್ಥಳ ಪರೀಶೀಲನೆ ಸಂದರ್ಭದಲ್ಲಿ ಛಾಯಾಚಿತ್ರ ಗಳನ್ನು ಪಡೆದುಕೊಂಡಿಲ್ಲ ನನ್ನ ವರದಿಯಲ್ಲಿ ಯಾವ ಮಾದರಿಯನ್ನು ಅನುಸರಿಸಿ ಬೆರಳಚ್ಚು ಮುದ್ರೆಯನ್ನು ಪರೀಶೀಲಿಸಿದೆ ಎಂದು ವಿವರಣೆ ನೀಡಿಲ್ಲ ಎಂದರೆ ಸರಿ. ನಾನು ಯಾವುದೇ ರೀತಿಯ ಬೆರಳು ಮುದ್ರೆ ಸಂಗ್ರಹಿಸದೇ ಇದ್ದರೂ ಸಹ ಚಾಸಾ-1 ಮತ್ತು ಪೋಲೀಸರ ಮಾತು ಕೇಳಿ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿ ಅಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ದೋಷಪುರಿತ ಪ್ರಮಾಣ ಪತ್ರ ಗಳನ್ನು ನೀಡಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.